

ಸಾಧ್ಯವಿದೆ. ಮೊಟ್ಟೆಯೊಳಗಿನ ಬಿಳಿ ಭಾಗದಲ್ಲಿ ಹಿಟ್ಟನ್ನು ಕಲಸಬೇಕು. ನಿಂಬೆರಸ, ಸಕ್ಕರೆ, ಜೇನುತುಪ್ಪ ಇವಿಷ್ಟನ್ನೂ ಒಂದಾಗಿ ಅದರೊಂದಿಗೆ ಮಿಶ್ರ ಗೊಳಿಸಿ ಕೂದಲಿನ ಮೇಲೆ ಹಚ್ಚುವುದರಿಂದ ಬುಡದಿಂದ ಕೂದಲನ್ನು ಕಿತ್ತು ಹಾಕುತ್ತದೆ. ವಾರದಲ್ಲಿ ಮೂರು ದಿನ ಇದನ್ನು ಲೇಪನ ಮಾಡಿ.

ಕಳಿತ ಬಾಳೆಹಣ್ಣು ಹಾಗೂ ಓಟ್ಸ್ ಮೀಲ್ ಇವುಗಳು ಮಿಶ್ರಣಗೊಂಡರೆ ಅನಗತ್ಯ ಕೂದಲುಗಳನ್ನು ಕೀಳಲು ನೆರವಾಗುತ್ತವೆ. ಕೂದಲಿನ ಬುಡದ ವರೆಗೂ ಲೇಪನ ಮಾಡಿ ಕೆಲವು ನಿಮಿಷಗಳು ಕಳೆದ ಬಳಿಕ ಪನ್ನೀರಿನಿಂದ ತೊಳೆಯಬೇಕು. ಇದರಲ್ಲಿ ಯಾವುದೇ ಅಡ್ಡ ಪರಿಣಾಮಗಳಿಲ್ಲ.

ಕಳಿತ ಪಪಾಯ ಹಣ್ಣಿನ ತಿರುಳನ್ನು ಮಥಿಸಿ ಅರಶಿನದ ಹುಡಿ, ಲೋಳಸರದ ತಿರುಳು, ಜೋಳದ ಹಿಟ್ಟು ಮತ್ತು ಸಾಸಿವೆಯೆಣ್ಣೆಗಳನ್ನು ಮಿಶ್ರಗೊಳಿಬೇಕು. ಈ ಪೇಸ್ಟನ್ನು ಬೇಡವಾದ ಕೂದಲುಗಳಿರುವ ಭಾಗಕ್ಕೆ ಹಚ್ಚಿ ಅರ್ಧ ತಾಸಿನ ಅನಂತರ ಶುದ್ಧವಾದ ನೀರಿನಿಂದ ಶುಭ್ರವಾಗಿ ತೊಳೆಯಬೇಕು. ಇದಾದ ಮೇಲೆ ಆ ಭಾಗಗಳಿಗೆ ಆಲಿವ್ ತೈಲವನ್ನು ಸವರುವುದು ಅಗತ್ಯ. ಈ ಉಪಚಾರದಿಂದ ಶೀಘ್ರವೇ ಬೇಡದ ಕೂದಲುಗಳು ನೀಡುವ ಮಾನಸಿಕ ಕಿರಿಕಿರಿಗೆ ವಿಮೋಚನೆಯಾಗುತ್ತದೆ.

ಕೆನೆ ಹಾಲಿನಲ್ಲಿ ಅರಶಿನದ ಹುಡಿಯನ್ನು ಕರಗಿಸಿ ದಪ್ಪ ಪೇಸ್ಟ್ ತಯಾರಿಸಬೇಕು. ಇದಕ್ಕೆ ಓಟ್ಸ್ ಧಾನ್ಯದ ಹಿಟ್ಟು ಮತ್ತು ಗುಲಾಬಿ ಜಲವನ್ನು ಬೆರೆಸಿ ತೆಗೆಯಬೇಕಾದ ಕೂದಲುಗಳ ಮೇಲೆ ಹಚ್ಚಬೇಕು. ಕೆಲವು ನಿಮಿಷಗಳು ಕಳೆದಾಗ ತಣ್ಣಗಿನ ನೀರಿನಿಂದ ತೊಳೆಯಬೇಕು.

ಈರುಳ್ಳಿಯನ್ನು ಕತ್ತರಿಸಿ ತುಳಸಿ ದಳಗಳನ್ನು ಸೇರಿಸಿ ರುಬ್ಬಿಕೊಳ್ಳಬೇಕು. ಇದನ್ನು ಕೂದಲುಗಳ ಮೇಲೆ ಲೇಪಿಸಿ ಒಣಗಲು ಬಿಡಬೇಕು. ಅರ್ಧ ತಾಸು ಕಳೆದ ಮೇಲೆ ಶುಚಿಗೊಳಿಸಬೇಕು. ಕೆಲವು ದಿನಗಳ ಕಾಲ ಹೀಗೆ ಲೇಪಿಸಿದರೆ ಬೇಡದ ರೋಮಗಳು ಇತಿಶ್ರೀಯಾಗುತ್ತವೆ.

ಕರ್ಪೂರ, ಬಿಳಿ ಕಾಳುಮೆಣಸುಗಳನ್ನು ನುಣ್ಣಗೆ ಚೂರ್ಣ ತಯಾರಿಸಿ ಬಾದಾಮಿ ಎಣ್ಣೆಯಲ್ಲಿ ಕರಗಿಸಬೇಕು. ಇದರ ಲೇಪನದಿಂದಲೂ ಅಂದದ ತ್ವಚೆಗೆ ಕುಂದು ತರುವ ಕೂದಲುಗಳನ್ನು ಕಳಚುವುದು ಸುಲಭವಾಗುತ್ತದೆ.

ಒಣಗಿಸಿದ ಬೇವಿನ ಎಲೆಗಳ ಹುಡಿ, ಅರಶಿನ, ಹೆಸರುಕಾಳಿನ ಹಿಟ್ಟು, ನಿಂಬೆರಸ ಇವಿಷ್ಟನ್ನು ಗುಲಾಬಿ ಜಲದಲ್ಲಿ ಕಲಸಿ ಪೇಸ್ಟ್ ಸಿದ್ಧಗೊಳಿಸಿದರೆ ಅದರ ಲೇಪನವೂ ಅನಗತ್ಯ ರೋಮಗಳ ವಿದಾಯಕ್ಕೆ ಸುಲಭವಾಗಿ ದಾರಿ ತೋರಿಸುತ್ತದೆ.

ಕಡಲೆಹಿಟ್ಟು, ಅರಶಿನಗಳನ್ನು ಬಿಸಿ ಹಾಲಿನಲ್ಲಿ ಕದಡಿ ತಯಾರಿಸಿದ ಗಟ್ಟಿ ಪಾಕವನ್ನು ಬೇಡದ ಕೂದಲುಗಳಿಗೆ ಬುಡದಿಂದಲೇ ಸವರಬೇಕು. ಕೆಲವು ನಿಮಿಷಗಳ ಬಳಿಕ ತೊಳೆದು ತೆಗೆದು ಅಲ್ಲಿಗೆ ಆಲಿವ್ ಎಣ್ಣೆ ಸವರಬೇಕು. ಇದು ಕೂಡ ಉತ್ತಮ ರೋಮನಾಶಕವೆನಿಸಿದೆ. ಈ ಎಲ್ಲ ಸಾಧನಗಳನ್ನು ಮನೆಯಲ್ಲಿಯೇ ತಯಾರಿಸಬಹುದು.



